ಶ್ರೀ ಬ್ರಹ್ಮಣ್ಯತೀರ್ಥರು

ಜೆ. ಎಚ್. ಬಿ. ಆಚಾರ್ಯ

ಶ್ರೀ ಬ್ರಹ್ಮಣ್ಯತೀರ್ಥರು

ಜೆ. ಎಚ್. ಬಿ. ಆಚಾರ್ಯ

1977

Rarest Archiver

ಶ್ರೀ ಬ್ರಹ್ಮಣ್ಯ ತೀರ್ಥರು

ನರಸಿಂಹ ದೇವರ ವರದಿಂದ ಜನಿಸಿದ
ವರಪುತ್ರ ಮಣಿನೀನು ! ವರದನೀನು
ಪುರುಷೋತ್ತಮಾರ್ಯರು ಪೋಷಿಸಿ ಬೆಳೆಸಿದ
ಪರಮಹಂಸನು ನೀನು ! ಪ್ರಾಜ್ಞ ನೀನು !
ಪರಲೋಕ ಸೇರಿದ ಧರಣೀಸುರನಕಾಯ್ದ
ಘನತಪೋಧನ ನೀನು ! ಜ್ಞಾನಿ ನೀನು !
ಚಂದ್ರಿಕಾಚಾರ್ಯರ ಸಲಹಿದ ಗುರು ನೀನು
ರಾಮಾರ್ಯಸುತನೀನು ! ರವಿಯುನೀನು !

ಬುಧನು ಬುಧರಲ್ಲಿ-ಚಂದ್ರಮ ಮುನಿಗಳಲ್ಲಿ
ರಾಜಗುರುವಿಗೆ ಗುರುನೀನು ! ಗ್ರಹಗಳಲ್ಲಿ
ಗಗನ ಮಾರ್ಗದಿ ಚರಿಪ ಭಾಸ್ಕರನು ನೀನು !
ಶ್ರೀಮದಬ್ಬೂರುಪುರವಾಸ ! ಶ್ರೀಶದಾಸ !

—ಭೀಮಕವಿ

Rarest Archives

|| ಶ್ರೀ ರಸ್ತು ||

ಕಂಸಧ್ವಂಸಿ ಪದಾಂಭೋಜ
ಸಂಸಕ್ತೋ ಹಂಸಪುಂಗವಃ ।
ಬ್ರಹ್ಮಣ್ಯ ಗುರುರಾಜಾಖ್ಯೋ
ವರ್ತತಾಂ ಮಮಮಾನಸೇ ||

ಶ್ರೀ ಮಧ್ವಾನಂದತೀರ್ಥ ಭಗವತ್ಪಾದಾಚಾರ್ಯರ ಬೃಹತ್‌ಪೀಠದಲ್ಲಿ ಬಂದ ಗಣ್ಯವ್ಯಕ್ತಿಗಳೆಂದರೆ **ಶ್ರೀಶ್ರೀ ಬ್ರಹ್ಮಣ್ಯತೀರ್ಥ ಶ್ರೀಪಾದಂಗಳವರು** ಇವರು ಸೂರ್ಯಾಂಶ ಸಂಭೂತರು. ಶ್ರೀ ಮಧ್ವಾಚಾರ್ಯರಿಂದ ಇವರು ಹನ್ನೊಂದನೆಯವರು. ಶ್ರೀ ವ್ಯಾಸರಾಜರ ಮಠವೆಂದು ಮಠತ್ರಯದಲ್ಲಿ ಪ್ರಸಿದ್ಧವಾದ ಮಠಕ್ಕೆ ಮೂಲಪುರುಷರಾದ ಶ್ರೀ ವ್ಯಾಸರಾಜ ಗುರುಸಾರ್ವಭೌಮರಿವರ ಕರಕಮಲ ಸಂಜಾತರು ! ಶ್ರೀ ಬ್ರಹ್ಮಣ್ಯತೀರ್ಥರು ಶ್ರೀ ಅಬ್ಬೂರು ಮಹಾಕ್ಷೇತ್ರದಲ್ಲಿ ವೃಂದಾವನಸ್ಥರಾಗಿ ಅದ್ಯಾಪಿ ವಿರಾಜಮಾನರಾಗಿದ್ದಾರೆ !

ಜ ನ ನ

ಬೆಂಗಳೂರು ಜಿಲ್ಲೆಯ ರಾಮಗಿರಿ (ರಾಮನಗರ) ಯಲ್ಲಿ **ಶ್ರೀ ರಾಮಾಚಾರ್ಯ**ರೆಂಬ ಶ್ರೋತ್ರೀಯ ಬ್ರಾಹ್ಮಣನು ಸಕುಟುಂಬವಾಗಿ ವಾಸಿಸುತ್ತಿದ್ದನು. ಆಚಾರ್ಯರಿಗೆ ಸಂತಾನವಿರಲಿಲ್ಲ. ಶ್ರೀಮಧ್ವಾಚಾರ್ಯರ ಪೀಠದಲ್ಲಿ ಆಗ **ಶ್ರೀ ಪುರುಷೋತ್ತಮತೀರ್ಥರು** ವಿರಾಜಮಾನರಾಗಿದ್ದರು. ಅವರ ಸೇವೆಯನ್ನು ಗೈದು ರಾಮಾಚಾರ್ಯನು ಮಗನನ್ನು ಪಡೆದನು. ಶ್ರೀ ಲಕ್ಷ್ಮೀನರಸಿಂಹನ ಪ್ರಸಾದದಿಂದ ಜನಿಸಿದ ಆ ಶಿಶುವಿಗೆ ಆಚಾರ್ಯರು **ನರಸಿಂಹಾಚಾರ್ಯ**ನೆಂದೇ ನಾಮಕರಣ ಮಾಡಿದರು.

ನರಸಿಂಹನು ದಿನ ದಿನ ಪ್ರವರ್ಧಮಾನನಾಗಿ ಬೆಳೆದನು. ತನ್ನ ಬಾಲಲೀಲೆಗಳಿಂದ ಮಾತಾಪಿತೃಗಳಿಗಮಂದಾನಂದವನ್ನುಂಟು ಮಾಡಿದನು.

Rarest Archiver

ಎಂಟನೇ ವರ್ಷದಲ್ಲಿ ಬಾಲಕನಿಗೆ ಮೌಂಜೀ ಧಾರಣೆಯನ್ನು ಮಾಡಿದರು ರಾಮಾಚಾರ್ಯರು. ಶ್ರೀ ಪುರುಷೋತ್ತಮತೀರ್ಥರಾವಟುವಿಗೆ ಬ್ರಹ್ಮೋಪದೇಶವನ್ನು ಮಾಡಿದರು. ಶ್ರೀಗಳವರಿಂದ ಗಾಯತ್ರಿ ಮಂತ್ರೋಪದೇಶವನ್ನು ಪಡೆದ ಭಾಗ್ಯ ಶಾಲಿ, ನರಸಿಂಹನೇ ಮುಂದೆ ಕಥಾನಾಯಕರಾದ ಬ್ರಹ್ಮಣ್ಯ ತೀರ್ಥರು.

ಸನ್ಯಾಸ

ವಟು ನರಸಿಂಹನು, ಗುರುಗಳಾದ ಪುರುಷೋತ್ತಮ ತೀರ್ಥರಲ್ಲಿ ವ್ಯಾಸಂಗವನ್ನು ಮಾಡಿದನು. ವಿದ್ಯಾಭ್ಯಾಸವು ಮುಗಿದನಂತರ ಗುರುಗಳಾ ಶಿಷ್ಯನಿಗೆ ತುರೀಯಾಶ್ರಮವನ್ನು ಕೊಡಲು ನಿಶ್ಚಯಿಸಿದರು. ನರಸಿಂಹಾಚಾರ್ಯರಿಗೆ ವಿಧ್ಯುಕ್ತ ರೀತಿ ಸನ್ಯಾಸವನ್ನಿತ್ತು **ಬ್ರಹ್ಮಣ್ಯತೀರ್ಥ**ರೆಂಬ ಅಭಿಧಾನವನ್ನಿತ್ತರು. ಅನಂತರ ಕೆಲಕಾಲ ಶಿಷ್ಯರೊಡನೆ ಇದ್ದು ಒಂದು ದಿನ ಶ್ರೀ ಪುರುಷೋತ್ತಮ ತೀರ್ಥರು, ಸಮೀಪದಲ್ಲಿರುವ ಗುಹೆಯನ್ನು ಪ್ರವೇಶಿಸಿ ಅದೃಶ್ಯರಾದರು ! ಅಬ್ಬೂರು ಕ್ಷೇತ್ರದಲ್ಲಿ ಯಾತ್ರಿಕರು, ಪುರುಷೋತ್ತಮತೀರ್ಥರ ಗುಹೆಯನ್ನು ಈಗಲೂ ನೋಡಬಹುದು

ಬದರೀ ಯಾತ್ರೆ

ಶ್ರೀ ಬ್ರಹ್ಮಣ್ಯತೀರ್ಥರು ಶಿಷ್ಯರಿಗೆ ಪಾಠ ಪ್ರವಚನಗಳನ್ನು ಹೇಳಿ, ಶ್ರೀ ಮಧ್ವಾಚಾರ್ಯ ಕರಾರ್ಚಿತ **ಶ್ರೀ ಯೋಗ ಪಟ್ಟಿಕಾನರಸಿಂಹಾದಿ** ದೇವತಾರ್ಚನೆಯನ್ನು ಮಾಡಿ, ಸರ್ವಜ್ಞ ಶಾಸ್ತ್ರಬೋಧೆ ಮಾಡುತ್ತಲಿದ್ದರು.

ಬುದ್ಧಿಯಲ್ಲಿ ಬೃಹಸ್ಪತಿಯಂತೆಯೂ ಭಕ್ತಿಯಲ್ಲಿ ಪ್ರಹ್ಲಾದನಂತೆಯೂ ವಿರಕ್ತಿಯಲ್ಲಿ ಸನಕಾದಿಗಳಂತೆಯೂ ಶೋಭಿಸುತ್ತಾ ಸಜ್ಜನರಿಗೆ ಯೋಗ್ಯತೆಯನ್ನರಿತು ಬ್ರಹ್ಮಜ್ಞಾನವನ್ನು ಬೋಧಿಸುತ್ತಾ ಬ್ರಹ್ಮಣ್ಯತೀರ್ಥರೆಂಬ ಸಾರ್ಥಕ ನಾಮಧೇಯದಿಂದ ವಿರಾಜಮಾನರಾದರು. ತಪೋನಿಷ್ಠಾಗರಿಷ್ಠರಾದ ಬ್ರಹ್ಮಣ್ಯತೀರ್ಥರು ಸಕಲ ತೀರ್ಥ ಯಾತ್ರೆಗಳನ್ನು ಮುಗಿಸಿ **ಶ್ರೀ ಬದರಿಕಾಶ್ರಮ**ವನ್ನು ಸೇರಿದರು. ಶ್ರೀ ನರನಾರಾಯಣರ ದರ್ಶನವನ್ನು ಪಡೆದರು.

Rarest Archives

ಅವರಿಂದ ಅನುಗ್ರಹೀತರಾಗಿ ಯೋಗ್ಯ ಶಿಷ್ಯನನ್ನು ಕರುಣಿಸಲು ಪ್ರಾರ್ಥಿಸಿ ಅಪ್ಪಣೆ ಪಡೆದು ಹಿಂತಿರುಗಿದರು. **ಬದರಿ** ಇಂದ ಮರಳಿ ಬರುವಾಗ ಧಾರವಾಡ ಜಿಲ್ಲೆಯಲ್ಲಿ ಸಾತೇನಹಳ್ಳಿ, ಎಂಬ ಗ್ರಾಮದಲ್ಲಿ ಜನರ ಪ್ರಾರ್ಥನೆ ಯಂತೆ **ಶ್ರೀ ಪ್ರಾಣದೇವರನ್ನು** ಪ್ರತಿಷ್ಠಿಸಿರುತ್ತಾರೆ.

ಮೃತ್ತಿಕಾ ಮಹಿಮೆ
ಶ್ರೀ ವಿಠಲ ಪ್ರತಿಮಾ ಪ್ರಾಪ್ತವಾಯಿತು !

ಶ್ರೀ ಬ್ರಹ್ಮಣ್ಯತೀರ್ಥರ ಕಾಲವಲ್ಲಿ **ಚೆನ್ನಪಟ್ಟಣವು** ಚಿಕ್ಕಗಂಗವಾಡಿ ಎಂಬ ಸಂಸ್ಥಾನದ ರಾಜಧಾನಿಯಾಗಿದ್ದಿತು. ಆ ರಾಜ್ಯದ ರಾಜನಿಗೆ ಸುಂದ ರನು, ಗುಣಶಾಲಿಯಾದ ಮಗನು ಯೌವನ ದೆಶೆಯಲ್ಲಿದ್ದನು. ಚಿಕ್ಕರಾಣಿಯು ಸವತಿಯ ಮಗನ ಬಗ್ಗೆ, ಚಿತ್ರಾಂಗಿ ಸಾರಂಗಧರನನ್ನು ಕಂಡಂತೆ ವರ್ತಿಸಿದಳು. ತನ್ನ ಕಾಮೇಚ್ಛೆಯು ಪೂರ್ಣವಾಗದಿರಲು, ರಾಜನಿಗೆ ದೂರು ಕೊಟ್ಟು ಯುವರಾಜನ ಕಾಲುಗಳನ್ನು ಕತ್ತರಿಸಲು ರಾಜಾಜ್ಞೆಯನ್ನು ಪಡೆದು ಸಂತೃಪ್ತಳಾದಳು !

ರಾಜಕುಮಾರನು ಕಾಲುಗಳನ್ನು ಕಳೆದುಕೊಂಡು ಚಿಂತಾಕ್ರಾಂತನಾಗಿ ಶ್ರೀ ಬ್ರಹ್ಮಣ್ಯತೀರ್ಥರನ್ನೆ ಮೊರೆಹೊಕ್ಕನು. ಅವರ ಪಾದಮೃತ್ತಿಕೆಯನ್ನು ಲೇಪಿಸಿಕೊಂಡು ಅವರ ಸೇವೆಯನ್ನು ಮಾಡಿದನು. ಕ್ರಮೇಣ ಕಾಲುಗಳನ್ನು ಪಡೆದು ಮೊದಲಿನಂತೆ ನಡೆಯಲಾರಂಭಿಸಿದನು. ಶ್ರೀ ಬ್ರಹ್ಮಣ್ಯತೀರ್ಥರಿಗೆ ಕೃತ ಜ್ಞನಾಗಿ ವಂದಿಸಿ ತಂದೆಯ ಬಳಿಗೆ ಬಂದು ವಾಸ್ತವಿಕ ವಿಷಯವನ್ನು ತಿಳಿಸಿ ತಂದೆಯ ಪ್ರಸನ್ನತೆಯನ್ನು ಪಡೆದು, ಪಟ್ಟಾಭಿಷೇಕವನ್ನು ಹೊಂದಿ ಯುವರಾಜನಾದನು. ಅನಂತರ ಆ ಯುವರಾಜನು ಶ್ರೀ ಬ್ರಹ್ಮಣ್ಯ ತೀರ್ಥರಲ್ಲಿಗೆ ಬಂದು ಸಾಷ್ಟಾಂಗ ಪ್ರಣಾಮ ಮಾಡಿ, ತನ್ನ ಕೃತಜ್ಞತೆಯನ್ನು ವಿನಯದಿಂದ ವಿಜ್ಞಾಪಿಸಿ ಕಾಣಿಕೆಯನ್ನು ಸ್ವೀಕರಿಸಬೇಕೆಂದು ಬೇಡಿ ಕೊಂಡನು. ಸರ್ವಸಂಗ ಪರಿತ್ಯಾಗ ಮಾಡಿದ ತಪೋಧನರಾದ ಶ್ರೀ ಬ್ರಹ್ಮಣ್ಯ ತೀರ್ಥರು, ಏನನ್ನೂ ಸ್ವೀಕರಿಸಲಿಲ್ಲ, ರಾಜ ಕೋಶಾಗಾರದಲ್ಲಿದ್ದ **ಶ್ರೀ ವಿಠಲ**

Rarest Archive

ಪ್ರತಿಮೆಯನ್ನು ಮಾತ್ರ ತೆಗೆದುಕೊಂಡರು. ಶ್ರೀ ಮಠದಲ್ಲಿ ಇಂದಿಗೂ ಈ ಪ್ರತಿಮೆಯನ್ನು ಶ್ರೀ ಬ್ರಹ್ಮಣ್ಯಕರಾರ್ಚಿತ ಶ್ರೀ ವಿಠಲ ದೇವರು ಎಂಬುದಾಗಿ ಹೇಳುವುದು ರೂಢಿಯಲ್ಲಿದೆ

ಭಾಸ್ಕರನು ಆರೋಗ್ಯಪ್ರದನಲ್ಲವೇ ?

ಇತ್ತೀಚೆಗೆ ಓರ್ವ ಗೃಹಸ್ಥನು ಸಕುಟುಂಬನಾಗಿ ಶ್ರೀ ಬ್ರಹ್ಮಣ್ಯತೀರ್ಥರ ಸೇವೆಗೆ ಬಂದನು. ಆತನ ಚಿಕ್ಕ ಮಗನು ಆಟವಾಡುವಾಗ ಬಂಡೆಯ ಮೇಲೆ ಬಿದ್ದನು ಹಣೆಯ ಪೊಟರೆಯು ಬಿದ್ದು ಹೋಯಿತು ಶ್ರೀಗಳಲ್ಲಿ ಪೂರ್ಣ ಭಕ್ತಿ ವಿಶ್ವಾಸಗಳುಳ್ಳ ಆ ಬಾಲಕನ ತಾಯಿಯು ಪೊಟರೆಯನ್ನು ಸಕ್ಕರಿಯನ್ನು ಹಾಕಿ ಹೊಂದಿಸಿ ಶ್ರೀ ಗುರುರಾಜರ ಬೃಂದಾವನದ ಮುಂದೆ ಮಲಗಿಸಿದಳು ! ಹಣೆಗೆ ಬಟ್ಟೆಯನ್ನು ಮಾತ್ರ ಕಟ್ಟಿದಳು. ಔಷಧೋಪಚಾರಗಳನ್ನು ಮಾಡಲಿಲ್ಲ. ಹೀಗೆ ಹದಿನೈದು ದಿನಗಳಲ್ಲಿ ಆ ಬಾಲಕನಿಗೆ ಹಣೆಯ ಗಾಯ ಪೂರ್ಣವಾಗಿ ಗುಣವಾಯಿತು. ಆ ಹುಡುಗನ ಮಾತಾ ಪಿತೃಗಳಿಗಮುಂದಾನಂದವಾಯಿತು ! ಶ್ರೀ ಬ್ರಹ್ಮಣ್ಯತೀರ್ಥರ ಮಹಿಮೆಯನ್ನು ಕಣ್ಣಾರಕಂಡ ಆ ದಂಪತಿಗಳು ಧನ್ಯರಲ್ಲವೇ ? ಭಾಸ್ಕರನು ಆರೋಗ್ಯಪ್ರದನಲ್ಲವೇ ? ತದಂಶ ಸಂಭೂತರನ್ನಾಶ್ರಯಿಸಿ ಆರೋಗ್ಯವನ್ನು ಪಡೆಯುವದರಲ್ಲಿ ಆಶ್ಚರ್ಯವೇನು ?

ಮಹಾತ್ಮರ ಬಳಿ ಮಂದಮತಿಗಳು

ಶ್ರೀ ಬ್ರಹ್ಮಣ್ಯತೀರ್ಥರು ಪಾಠಪ್ರವಚನಗಳಲ್ಲಿ, ಹೆಚ್ಚು ಕಾಲಕಳೆಯುತ್ತಿದ್ದರು. ಪೂಜಾ ಕಾಲದಲ್ಲಿ ಕಲಶಪೂಜಾ, ಪೀಠಪೂಜಾಕ್ಕೆ ಪ್ರಾಶಸ್ತ್ಯ, ಗಮನ ಕೊಟ್ಟು, ದೇವರ ಪೂಜೆಯನ್ನು ಬಹು ಕ್ಷಿಪ್ರಕಾಲದಲ್ಲಿ ಮುಗಿಸುತ್ತಿದ್ದರು. ಇದು ಮಂದಮತಿಗಳಿಗೆ ಹೇಗೆ ಅರ್ಥವಾಗಬೇಕು ! ಶ್ರೀಗಳವರು ದೇವರ ಪೂಜೆಯನ್ನು ಅತ್ಯಲ್ಪ ಕಾಲದಲ್ಲಿ ಮುಗಿಸುತ್ತಾರೆ ! ಎಂಬುದಾಗಿ ಆಕ್ಷೇಪಣೆಯ ಟೀಕೆ ಮಾಡಿದರು. ತಪೋಧನರು ಮಹಾಜ್ಞಾನಿಗಳು ಆದ

Rarest Archiver

ಶ್ರೀಗಳಿದನ್ನರಿತು ಮರುದಿನ ಪೂಜಾಕಾಲಕ್ಕೆ ಎಡ ಬಲ ಸೇವಕನಿಗೆ "ನಾವು ವೃದ್ಧರು —ಕಲಶೋದಕವನ್ನು ಶಂಖದಲ್ಲಿ ಹಾಕಲು ಶಕ್ತಿಸಾಲದು. ನೀನೆ ಆ ಕೆಲಸವನ್ನು ಮಾಡು" ಎಂಬುದಾಗಿ ಅಪ್ಪಣೆಯಿತ್ತರು. ಪರಿಚಾರಕನು ತನ್ನ ಶಕ್ತಿಯನ್ನೆಲ್ಲ ಪ್ರಯೋಗಿಸಿ ಕಲಶವನ್ನು ಕದಲಿಸಲಾರದೇ ನಿಂತನು. ಆಗ ಶ್ರೀಗಳವರು ಕಲಶವನ್ನು ತಮ್ಮ ಕೈಯಿಂದ ತೆಗೆದುಕೊಂಡು ಉದಕವನ್ನು ಶಂಖದಲ್ಲಿ ಹಾಕಿ ಅಭಿಷೇಕವನ್ನು ಮಾಡಿದರು. ಪೂಜೆ ಮುಗಿಯಿತು. ತೀರ್ಥ ಪ್ರಸಾದಗಳು ನಡೆದವು. ಭೋಜನಾನಂತರದಲ್ಲಿ ಪರಿಚಾರಕರನ್ನು, ಆಕ್ಷೇಪಿಸಿದ ಜನರನ್ನು ಕರೆಸಿ, "ಶ್ರೀ ಹರಿಯ ಪರಿವಾರದ ದೇವತೆಗಳನ್ನು ಆಯಾ ಪೂಜಾಸಾಮಗ್ರಿಗಳಲ್ಲಿ ಆಹ್ವಾನಿಸಲು ಧ್ಯಾನಾಸಕ್ತರಾಗಿ ಹೆಚ್ಚು ಕಾಲ ಕಳೆಯುವೆವು. ಸನ್ನಿಹಿತರಾದ ದೇವತೆಗಳು ಅವರ ಕಾರ್ಯಗಳನ್ನವರೇ ಮಾಡುವುದರಿಂದ ಪೂಜೆಯು ಕಾಲವು ಸಂಕ್ಷಿಪ್ತವಾಗುವುದು. ಇದು ನಮ್ಮ ದೇವಪೂಜಾ ಪದ್ಧತಿ" ಎಂಬುದಾಗಿ ತಿಳಿ ಹೇಳಿ ಮಂದಮತಿಗಳ ಮನದ ಶಂಕೆಯನ್ನು ಮಾಯು ಮಾಡಿದರು.

ಮಹಾತ್ಮರ ನಡೆನುಡಿಗಳು ಮಂದ ಮತಿಗಳಿಗೆ ಅರಿಯಲಾಗದು !

ಚಂದ್ರಿಕಾಚಾರ್ಯರ ಜನನ

ತುಲಾ ಮಾಸದಲ್ಲಿ ಕಾವೇರಿ ಸ್ನಾನ ಮಾಡಿದರೆ ಗಂಗಾ ಸ್ನಾನದ ಫಲ ಬರುವುದು ಪುರಾಣೋಕ್ತಿಯಾದುದರಿಂದ, ಶ್ರೀ ಬ್ರಹ್ಮಣ್ಯತೀರ್ಥರು ಕಾವೇರಿ ತೀರದಲ್ಲಿರುವ **ಬನ್ನೂರು** ಎಂಬ ಗ್ರಾಮಕ್ಕೆ ಬಂದರು. ಬನ್ನೂರು ಗ್ರಾಮವು ಮೈಸೂರಿಗೆ ಹದಿನೆಂಟು ಮೈಲಿ ದೂರದಲ್ಲಿದೆ. ಆ ಗ್ರಾಮವಾಸಿಗಳಾದ ರಾಮಚಾರ್ಯರೆಂಬ ಸದ್ಗೃಹಸ್ಥರು, ವೃದ್ಧರು, ಅಸ್ವಸ್ಥತೆಯಲ್ಲಿದ್ದರು. ಇಹ ಲೋಕದ ಯಾತ್ರೆಯನ್ನು ಮುಗಿಸಿದರು. ಸಾಧ್ವಿ **ಸೀತಾಬಾಯಿ** ಪತಿಯನ್ನು ಕಳೆದುಕೊಂಡು, ಸಹಗಮನಕ್ಕೆ ಅಪ್ಪಣೆ ಪಡೆಯಲು ಅಲ್ಲಿಯೇ ವಾಸವಾಗಿದ್ದ ಶ್ರೀ ಬ್ರಹ್ಮಣ್ಯತೀರ್ಥರಲ್ಲಿಗೆ ಬಂದಳು.

Rarest Archive

ಶಿಷ್ಯರಿಗೆ ಪಾಠ ಹೇಳಿ ಮುಗಿಸಿ ಕುಳಿತಿದ್ದ ಶ್ರೀಗಳಿಗೆ ಸೀತಾಬಾಯಿಯು ಬಂದು ನಮಸ್ಕಾರ ಮಾಡಿದಳು. ತಪೋನಿಷ್ಠಾ ಗರಿಷ್ಠರು, ಜ್ಞಾನಿಶ್ರೇಷ್ಠರು ಆದ ಶ್ರೀ ಬ್ರಹ್ಮಣ್ಯತೀರ್ಥರು ಆ ಸತಿಗೆ

"**ದೀರ್ಘಸುಮಂಗಲೀಭವ**" ಎಂಬುದಾಗಿ ಆಶೀರ್ವದಿಸಿದರು. ನೆರೆದಿದ್ದ ಜನರು, ವಿಷಯವನ್ನು ತಿಳಿಸಲು ಸಂಕೋಚಪಡುತ್ತಾ ಆ ಸತೀಮಣಿಯನ್ನು ಮತ್ತೊಮ್ಮೆ ನಮಸ್ಕಾರ ಮಾಡಲು ಸೂಚಿಸಿದರು. ಆಗ ಶ್ರೀಗಳವರು

"**ಸುಪುತ್ರಪ್ರಾಪ್ತಿರಸ್ತು**" ಎಂದು ನುಡಿದರು. ಚಕಿತರಾದ ಜನರು ಶ್ರೀಗಳಿಗೆ ವಿಷಯವನ್ನು ವಿಜ್ಞಾಪಿಸಿದರು. ಆಗ ಶ್ರೀಗಳವರು ರಾಮಾಚಾರ್ಯನು ಮೃತನಾಗಿಲ್ಲ. ನಮ್ಮ ವಾಣಿ ಅಸತ್ಯವಾಗಲಾರದು. ಆಚಾರ್ಯನನ್ನು ಕರೆತನ್ನಿ ಎಂದರು ಕಮಂಡಲೋದಕದಿಂದ ರಾಮಾಚಾರ್ಯನನ್ನು ಬದುಕಿಸಿದರು !

ಪತಿದೇವನನ್ನು ಕಳೆದುಕೊಂಡು ಸಂಕಟದಲ್ಲಿದ್ದ ಸತೀಮಣಿಯ ಮಾಂಗಲ್ಯವನ್ನು ಕರುಣಿಸಿ ಸುಪುತ್ರನನ್ನು ಅನುಗ್ರಹಿಸಿದಾಗ ಆ ಸತೀಮಣಿಯ ಆನಂದಕ್ಕೆ ಮಿತಿಯುಂಟೆ ? ಸೀತಮ್ಮ ರಾಮಾಚಾರ್ಯರಿಬ್ಬರು ಶ್ರೀಗಳಿಗೆ ಪ್ರಣಾಮ ಮಾಡಿನಿಂತರು. ಆಗ ಶ್ರೀಗಳು ಆ ದಂಪತಿಗಳಿಗೆ ಹುಟ್ಟುವ ಮಗನನ್ನು ತಮಗೆ ಒಪ್ಪಿಸಬೇಕೆಂದು ಅವರಿಗೆ ಕರಾರುಮಾಡಿ ತಿಳಿಸಿದರು. ಸೀತಮ್ಮ ರಾಮಾಚಾರ್ಯರು ಅದಕ್ಕೆ ತಮ್ಮ ಸಮ್ಮತಿಯನ್ನು ವ್ಯಕ್ತಪಡಿಸಿದರು.

ಪುಣ್ಯದಂಪತಿಗಳಾದ ಸೀತಮ್ಮ ರಾಮಾಚಾರ್ಯರಿಗೆ ಶ್ರೀ ಬ್ರಹ್ಮಣ್ಯತೀರ್ಥರ ಆಶೀರ್ವಚನದಿಂದ ಜನಿಸಿದ ಶಿಶುವೇ ಬೆಳೆದು **ಶ್ರೀ ವ್ಯಾಸರಾಜಗುರುಸಾರ್ವಭೌಮ**ರಾಗಿ ವಿರಾಜಮಾನವಾಯಿತು ! ಶ್ರೀ ಚಂದ್ರಿಕಾದ್ಯದ್ಗ್ರಂಥಗಳನ್ನು ರಚಿಸಿ, ಶ್ರೀ ವ್ಯಾಸರಾಜರು **ಶ್ರೀ ಚಂದ್ರಿಕಾಚಾರ್ಯರಾದರು.**

Rarest Archive

ಮಹಾತಪಸ್ವಿಗಳಾದ ಶ್ರೀ ಬ್ರಹ್ಮಣ್ಯತೀರ್ಥರು ಶ್ರೀ ಚಂದ್ರಿಕಾಚಾರ್ಯರ ಜನನಕ್ಕೆ ಕಾರಣರಾದರು.

ಕುಂದಾಪುರ
ಶ್ರೀ ವ್ಯಾಸರಾಜ ಮಠಾಧೀಶರು

ಜಗದ್ಗುರು **ಶ್ರೀ ಮನ್ಮಧ್ವಾಚಾರ್ಯ**ರಿಂದ ಆಶ್ರಮ ಪಡೆದ **ಶ್ರೀ ಪದ್ಮನಾಭತೀರ್ಥ**ರ ಪರಂಪರೆಯಲ್ಲಿ **ಶ್ರೀ ಟೀಕಾಕೃತ್ಪಾದ**ರನಂತರ **ಶ್ರೀ ವಿದ್ಯಾಧಿರಾಜತೀರ್ಥ**ರು ದ್ವೈತವೇದಾಂತ ಸಾಮ್ರಾಜ್ಯವನ್ನಾಳಿದರು. ಶ್ರೀ ವಿದ್ಯಾಧಿರಾಜತೀರ್ಥರಿಗೆ ಶ್ರೀ ರಾಜೇಂದ್ರತೀರ್ಥರು ಶ್ರೀ ಕವೀಂದ್ರತೀರ್ಥರು ಶಿಷ್ಯರಾದರು. ಶ್ರೀ ರಾಜೇಂದ್ರತೀರ್ಥರು ಮೊದಲಬಾರಿಗೆ ಉತ್ತರ ಹಿಂದೂಸ್ಥಾನದಲ್ಲಿ ಸಂಚಾರವನ್ನು ಕೈಗೊಂಡು ದ್ವೈತಮತ ಪ್ರಚಾರಮಾಡಿದರು. ಶ್ರೀ ರಾಜೇಂದ್ರತೀರ್ಥರ ಶಿಷ್ಯರೇ ಶ್ರೀ ಜಯಧ್ವಜತೀರ್ಥರು ಕಥಾನಾಯಕರಾದ **ಶ್ರೀ ಬ್ರಹ್ಮಣ್ಯತೀರ್ಥ**ರ ಗುರುಗಳಾದ ಶ್ರೀ ಪುರುಷೋತ್ತಮತೀರ್ಥರು, ಶ್ರೀ ಜಯಧ್ವಜರಲ್ಲಿ ಆಶ್ರಮ ಪಡೆದರು.

ಶ್ರೀ ಬ್ರಹ್ಮಣ್ಯತೀರ್ಥರ ಪ್ರೀತಿಯ ಶಿಷ್ಯರಾದ ಶ್ರೀ ವ್ಯಾಸರಾಜಗುರುಸಾರ್ವಭೌಮರು, ದ್ವೈತವೇದಾಂತ ಪ್ರಚಾರದಲ್ಲಿ ಸಂಚಾರದಲ್ಲಿದ್ದರು. ಆಗ ಶ್ರೀ ಬ್ರಹ್ಮಣ್ಯತೀರ್ಥರು, ಮತ್ತೊಬ್ಬ ಶಿಷ್ಯನಿಗೆ ಆಶ್ರಮವನ್ನಿತ್ತು **ಶ್ರೀಧರತೀರ್ಥ**ರೆಂದು ಕರೆದರು.

ಶ್ರೀಧರತೀರ್ಥರ ಪರಂಪರೆಯಲ್ಲಿ ಬಂದ ಮಠವೇ ಈಗ **ಕುಂದಾಪುರ ಶ್ರೀ ವ್ಯಾಸರಾಜ ಮಠ** ವೆಂಬುದಾಗಿ ಪ್ರಸಿದ್ಧಿಯಾಗಿದೆ. **ಅಭಿನವ ಮಧ್ವಾಚಾರ್ಯರೆಂದು ಕರೆಸಿಕೊಂಡು, ಆಸೇತು ಶೀತನಗ ಪರ್ಯಂತ ಪರ್ಯಟನೆಮಾಡಿ, ದ್ವೈತವೇದಾಂತ ದುಂದುಭಿಯನ್ನು ಮೊಳಗಿಸಿ, ಸುಪ್ರಖ್ಯಾತರಾಗಿ, ಶ್ರೀ ಪಂಢರೀಪುರಕ್ಷೇತ್ರರಾಜದಲ್ಲಿ ಬೃಂದಾವನಸ್ಥರಾಗಿ ವಿರಾಜಮಾನರಾದ ಶ್ರೀ ಸತ್ಯಧ್ಯಾನಯತಿಸಿಂಹರ ಶಿಷ್ಯ ಕೋಟಿ**

Rarest Archiver

ಯಲ್ಲಿ ಒಬ್ಬರಾದ ಶ್ರೀ ಶ್ರೀ ಲಕ್ಷ್ಮೀಶತೀರ್ಥ ಶ್ರೀ ಪಾದಂಗಳವರೀಗ ಕುಂದಾಪುರ ಶ್ರೀ ವ್ಯಾಸರಾಜ ಮಠದಲ್ಲಿ ಪೀಠಸ್ಥರಾಗಿದ್ದಾರೆ ! ಶ್ರೀಗಳವರು ಮಹಾತಪಸ್ವಿಗಳು ! ಘನವಿದ್ವಾಂಸರು ತಮ್ಮ ಅಮೋಘ ವಾದ ಪ್ರವಚನದಿಂದ ಸಹಸ್ರಾರು ಸಾತ್ವಿಕರನ್ನು ಸನ್ಮಾರ್ಗದಲ್ಲಿನಡೆಸಿ, ಗಮನಾರ್ಹವಾದ ಪರಿವರ್ತನೆಗಳನ್ನು ಪೊಂದಲು ಕಾರಣರಾಗಿದ್ದಾರೆ ! ಇವ ರಿಂದ ಸಾಕಷ್ಟು ಸುಜನೋದ್ಧಾರವಾಗಿದೆ !

ಉ ಪ ಸ ಂ ಹಾ ರ

ಶ್ರೀ ಬ್ರಹ್ಮಣ್ಯತೀರ್ಥರು ಶ್ರೀ ವ್ಯಾಸರಾಜರು ಸಂಚಾರದಲ್ಲಿರಲು, ಶ್ರೀಧರತೀರ್ಥರಿಗೆ ಆಶ್ರಮವನ್ನು ಕೊಟ್ಟರು. ಅಬ್ಬೂರು ಮಹಾಕ್ಷೇತ್ರದಲ್ಲಿ ಕಣ್ವ ನದೀತೀರದಲ್ಲಿ ೧೪೬೭ನೇ ವೈಶಾಖ ಕೃಷ್ಣದ್ವಾದಶಿ ಬೃಂದಾವನಸ್ಥರಾಗಿ ವಿರಾಜಮಾನರಾಗಿದ್ದಾರೆ ! ಸಾಧಾರಣವಾಗಿ ವೃಂದಾವನಗಳಿಗೆ ಮಂಟಪ ವನ್ನು ನಿರ್ಮಿಸುವ ಪದ್ಧತಿ ರೂಢಿಯಲ್ಲಿದೆ ! ಇಲ್ಲಿಯೂ ಹಾಗೆ ಮಾಡಲು ಪ್ರಯತ್ನಿಸಿ ವಿಫಲರಾದರಂತೆ ! ಸೂರ್ಯಾಂಶ ಸಂಭೂತರನ್ನೂ ಮಂಟಪ, ಮಠವನ್ನೂ ಕಟ್ಟಿ ಮುಚ್ಚಿಡಲು ಸಾಧ್ಯವೇ ? ಎಂಬಂತೆ, ಶ್ರೀ ಬ್ರಹ್ಮಣ್ಯ ತೀರ್ಥರ ವೃಂದಾವನಕ್ಕೆ ಯಾವ ವಿಧವಾದ ಕಟ್ಟಡವನ್ನು ಕಟ್ಟಿರುವುದಿಲ್ಲ. !

ಗುರುತಪೋಗಣ್ಯ **ಬ್ರಹ್ಮಣ್ಯಗುರುವರೇಣ್ಯ** !
ಸಾರ್ಥಕಾಖ್ಯದಿ **ಲಕ್ಷ್ಮೀಶತೀರ್ಥ**ರೀಗ
ಚಾರುಭವದೀಯ ಪೀಠರಾಜದಲಿಮೆರೆವ
ಕರವಮುಗಿಯುವೆ ! ಕಾಪಾಡು ! ಕಮಲಮಿತ್ರ !

ಶ್ರೀ ಬ್ರಹ್ಮಣ್ಯತೀರ್ಥರು ಸರ್ವರಿಗೂ ಮಂಗಳವನ್ನುಂಟುಮಾಡಲಿ !

ಶ್ರೀಕೃಷ್ಣಾರ್ಪಣಮಸ್ತು

Rarest Archive

೮ –ಸೌರಾಷ್ಟ್ರ ಝಂಪೆತಾಳ

ಗುರುವ್ಯಾಸರಾಯರ ಮಹಿಮೆಗಳ ಕೇಳಿ || ಪ ||
ಹರುಷದಿಂ ಕೊಂಡಾಡಿ ನಲಿದಾಡಿ ಜನರು || ಅ.ಪ ||

ಅಂದು **ಬ್ರಹ್ಮಣ್ಯತೀರ್ಥ**ರಿಗೆ ಬದರಿಯಲಿ
ಮುದದಿಂದಲಿ ನರನಾರಾಯಣರು ||
ಕಂದನ್ನ ಕೊಡುವೆನೆಂದು | ಭಿಕ್ಷೆಯನೀಡೆ |
ತಂದೆ ಮಧ್ವೇಶ ನಿನ್ನ ದಯವಿರಲಿ ಎಂದೂ || ೧ ||

ಮುನ್ನ ಬ್ರಹ್ಮಣ್ಯತೀರ್ಥರು | ಸಂಚರಿಸುತ್ತ |
ಬನ್ನೂರು ಮಾರ್ಗದಲಿ | ಬರುತಲಿರಲು ||
ಕನ್ನ್ಯೆಯೊಬ್ಬಳು ತನ್ನ | ಪತಿಯ ಭಿಕ್ಷೆಬೇಡೆ
ಚನ್ನಾಗಿ ಮಾಂಗಲ್ಯ | ಕರುಣಿಸಿತ್ತರು ಅಂದೂ || ೨ ||

ನಿನ್ನಲ್ಲಿ ಮೊದಲು ಜನಿಸಿದ ಆ ಪುತ್ರನ್ನ
ಸನ್ಮಾನ್ಯದಿಂದೆಮಗೆ ಕೊಡು ಎನ್ನಲೂ ||
ಧನ್ಯಳಾದೆನು ಎಂದು ಪಾದಕ್ಕೆ ಎರಗುತ್ತ |
ಸನ್ಮಾನದಲಿ ಮಾಂಗಲ್ಯ ಪಡೆದೆವೆಂದೂ || ೩ ||

ತಂದೆ ತಾಯಿಗೆ ಆನಂದವಾಗಲು ಗರ್ಭ |
ಅಂದು ಶಿಶು ಜನಿಸುವಾಸಮಯದಲ್ಲೀ ||
ಬಂದು **ಶ್ರೀ ಬ್ರಹ್ಮಣ್ಯತೀರ್ಥ** ಮುನಿಗಳಿಗೊರೆಯೆ |
ಕಂದ ಗ್ಹರಿವಾಣದಲಿ ಜನನವಾಗಲಿ ಎಂದೂ || ೪ ||

ಚಿನ್ನದ್ಹರಿವಾಣದಲ್ಲಿ | ಕಂದನ್ನ ಮಲಗಿಸಿ | ಪಾ
ವನ್ನ ನಾಮೇಳದಿ ಮಠಕೆ ತರಲು ||
ಪುಣ್ಯ ಶಿಶುವಿಗೆ ಜಾತಕರ್ಮವನೆ ಮಾಡೀ |
ಚನ್ನ ವ್ಯಾಸರಾಯನೆಂಬ | ಹೆಸರಿಟ್ಟರೆಂದೂ || ೫ ||

Rarest Archiver

ಸುರಭಿಮಾಲೆಯನ್ನು ಶಿಶುವಿಗುಣಿಸುತಲಂದು ।
ಪರಿಪರಿಯಲಿಬೆಳಸಿ ಸೊಬಗಿನಿಂದ ॥
ಅರಳೆಲೆ ಪೂಗಾಯಿ । ಕರ್ಣಕುಂಡಲ ವಿಟ್ಟು ।
ಸರಪಳೀ ಪದಕ ಹುಲಿಯುಗುರು ಕಟ್ಟಿದರಾಗ ॥ ೬ ॥

ಕಿರುಗೆಜ್ಜೆ ಅಂದಿಗೆ ತೋಳತಾಯಿತು ಮಣಿ ।
ಮೆರೆವ ಸೊಬಗಿನಿಂದ ಶಶಿಯಂತೆ ಮೆರೆಯೆ ॥
ವರುಷ ವೈದರಲಿ ಕೋವಿದರೆಲ್ಲ ನೆರೆದೂ ।
ಹರುಷದಿಂ ಮಂತ್ರೋಪದೇಶ ಮಾಡಿದರೆಂದು ॥ ೭ ॥

ಆದರವಮಾಡಿ ಅಗ್ರಜರೆಲ್ಲನೆರೆದಿರೆ ।
ಮೋದದಕ್ಷಿಣೆಯಿಂದ । ಸಂತುಷ್ಟಿಪಡಿಸಿ ॥
ಆದರಿಸಿ ಮೃಷ್ಟಾನ್ನ ಭೋಜನವಮಾಡಿಸಿ ।
ನೋದಿತರಾದರಾ ಬ್ರಹ್ಮಣ್ಯತೀರ್ಥರಂದೂ ॥ ೮ ॥

ಹೊಳೆವ ಕರ್ಣದಿ ಸುವರ್ಣ ಕುಂಡಲವಿಟ್ಟು ।
ಬಳಸಿ ನಡುವಿಗೆ ಸ್ವರ್ಣಮೌಂಜಿಯನು ಕಟ್ಟಿ ॥
ತಳಿತ ಸಂತೋಷದಿ । ಭವತಿ ಭಿಕ್ಷಾನ್ನಗಳ ।
ಬೇಡಿಸಿತ್ತರಾಗ । **ಬ್ರಹ್ಮಣ್ಯತೀರ್ಥ**ರಂದೂ ॥ ೯ ॥

ವರುಷ ಸಪ್ತದಿ ವ್ಯಾಸೇಂದ್ರಗೆ ತುರ್ಯವ ।
ಹರುಷದಿಂ ಬ್ರಹ್ಮಣ್ಯತೀರ್ಥರು ಕೊಡಲು ॥
ಕರದಲಿ ದಂಡ ಕಮಂಡಲವಧರಿಸಿ ।
ಗುರುಗಳ ಚರಣಕೆ ಎರಗಿದರೆಂದೂ ॥ ೧೦ ॥

ವ್ಯಾಸರಾಯರೆಂಬ ಕಲ್ಪಲತೆ ಚರಿತೆಯ ।
ಲೇಸಾಗಿ ಬಣ್ಣಿಪರು ಸಾಧುಜನರೂ ॥
ವಾಸುದೇವನಮ್ಮ । **ಪುರಂದರ ವಿಠಲನ ।**
ದಾಸರೆಂದನುದಿನದಿ । ಕೊಂಡಾಡಿದರೆಂದೂ ॥ **೧೧** ॥

Rarest Archiver

॥ ಶ್ರೀ ಬ್ರಹ್ಮಣ್ಯತೀರ್ಥ ಗುರುರಾಜ ಸ್ತೋತ್ರಂ ॥

ಶ್ರೀ ವಿಟ್ಠಲಃ ಪಾತು ಸದಾಽತ್ತಲೀಲೋ
ಬಾಲಾಕೃತಿರ್ಲೋಲ ಸಕೇಶ ಜಾಲಃ
ಮಧ್ವೋಽಘವಿಧ್ವಂಸಕರಃ ಕರೋತು
ಬುದ್ಧಿಂ ವಿಶುದ್ಧಾಂ ಖಲು ಮಾಧವೇಽಲಮ್ ॥ ೧ ॥

ಶ್ರೀ ವ್ಯಾಸರಾಜ ಮುನಿಪಾರ್ಚಿತಪಾದಪೀಠೋ
ಬ್ರಹ್ಮಣ್ಯತೀರ್ಥ ಗುರುರಾಜಯತೀಂದ್ರ ಚಂದ್ರಃ ॥
ಗೋಭಿಸ್ತಮಾಂಸಿ ಹರತಾದ್ಭವಕಾನನೇಷು
ಸನ್ಮಾರ್ಗದೃಷ್ಟಿವಿಕಲಸ್ಯ ಸತೋಜನಸ್ಯ ॥ ೨ ॥

ಶ್ರೀಮನ್ನೃಸಿಂಹಚರಣಾಂಬುಜ ಪೂಜನೋತ್ಥ
ಸರ್ವಾರ್ಥ ಸಂಪದಮುರ ಪ್ರಕೃತಿರ್ಯತೀಂದ್ರಃ ॥
ಬ್ರಹ್ಮಣ್ಯತೀರ್ಥ ಗುರುರಾಡಮರದ್ರುಮೋಽಸೌ
ಸರ್ವೇಷ್ಟ ಮಾಶು ವಿದಧಾತು ಸುಬೋಧಸಾಂದ್ರಃ ॥೩॥

ವಜ್ರಾಯಿತೋಽಘಾದ್ರಿವಿಭೇದನೇಽಸೌ
ಚಂದ್ರಾಯಿತಃ ಸತ್ಕುಮುದಪ್ರಹರ್ಷೇ ॥
ಸೂರ್ಯಾಯಿತಃ ಸದ್ಧೃದಯ ಪ್ರಕಾಶೇ
ಬ್ರಹ್ಮಣ್ಯತೀರ್ಥಃ ಸತತಂ ಸಪಾಯಾತ್ ॥ ೪ ॥

ನೃಸಿಂಹಸೇವಾ ಪರಿಪೂತಕಾಯಃ
ಸಂಸಾರಸಿಂಧೂತ್ತ ಗಣಾಭ್ಯುಪಾಯಃ ।
ನಿರ್ದೋಷ ಬೋಧೇನ ವಿನಷ್ಟಮಾಯೋ
ಬ್ರಹ್ಮಣ್ಯಯೋಗೀ ವೃಜಿನಾತ್ಸಪಾಯಾತ್ ॥೫॥

Rarest Archiver

ಅಷ್ಟಾಂಗ ಯೋಗಪ್ರವಣಾಂತರಂಗಃ
ಕಷ ವ್ರತಾಚಾರ ಕೃಶೀ ಕೃತಾಂಗಃ ||
ಇಷ್ಟಾರ್ಥ ಪೂರ್ಣಾನ್ ಕುರುತಾನ್ನತಾಂಗಾನ್
ನಷ್ಟೋಚ್ಚ ಸಂಸಾರಚಲತ್ತರಂಗಃ ||೬||

ಶ್ರೀಮಧ್ವಮುನಿವಂಶಾಬ್ಧಿ ಚಂದ್ರಾಯಿತನಿ ಜಾಕೃತಿಃ |
ಜಯಧ್ವಜಕರಾ ಭ್ಜೋತ್ಥ ಪುರುಷೋತ್ತಮ ಪುತ್ರಕಃ ||೭||

ಬ್ರಹ್ಮಣ್ಯತೀರ್ಥ ಗುರುರಾಡ್ ದದಾತು ಜ್ಞಾನಮುತ್ತಮಮ್|
ಸಂಸಾರ ಕ್ಲೇಶನಾಶಂಚಸಾಧಯೇತ್ಸಿದ್ಧಪುಂಗವಃ || ೮ ||

ವಾದೀಂದ್ರ ಕುಂಭದಳನೇ ಬ್ರಹ್ಮಣ್ಯಯತಿರಾಡ್ ಗಜಃ
|ಹೃದಾರಾಮ ಸ್ಥಿತಾಽಘೇಕ್ಷುದಂಡಂ ಖಂಡ
[ಯಿತಾದ್ಧೃಡಮ್] || ೯ ||

ದಯಾಲೋರ್ಗೇಯ ಚರಿತಾದ್ಬ್ರಹ್ಮಣ್ಯವರ ಸದ್ಗುರೋಃ |
ಕೋಽನ್ಯಃ ಸರ್ವೇಷ್ಟದೋಽಸ್ಮಾಕ ಮಧುನಾ
[ಧರಣೀತಲೇ] ||೧೦||

ಬ್ರಹ್ಮಣ್ಯಗುರುರಾಜಾಯ ನಮೋಽಜ್ಞಾನ ನಿವಾರಿಣೇ |
ನಮೋ ನಮೋ ವ್ಯಾಸರಾಜ ಗುರುವೇಽಖಿಲಸಂಪದೇ ||೧೧||

ಬ್ರಹ್ಮಣ್ಯತೀರ್ಥಾಯ ನಮ ಇತ್ಯಷ್ಟಾಕ್ಷರಮಂತ್ರಕಮ್ |
ಜಪತಾಮಿಷ್ಟಸರ್ವಸ್ವಮ್ ಕರಗಂಸ್ಯಾ
[ದಸಂಶಯಮ್] ||೧೨||

ನಿವರ್ತಂತೇಽಖಿಲಾರೋಗಾಃ ಕುಷ್ಠಾಪಸ್ಮಾರ ಪೂರ್ವಕಾಃ |
ಭ್ರಮಸಂಶಯಪೂರ್ವಾಶ್ಚ ಮನೋದೋಷಾಶ್ಚ
[ಯೇಽಖಿಲಾಃ] ||೧೩||

Rarest Archiver

ಪ್ರವರ್ತಂತೇಸುತಾಃ ಪೌತ್ರಾಧನಧಾನ್ಯ ಗವಾದಯಃ|
ಜ್ಞಾನ ವಿಜ್ಞಾನಪೂರ್ವಾಶ್ಚ ಮನೋಧರ್ಮಾಃ
[ಶುಭಾಶ್ಚಯೇ] ||೧೪||

ಬ್ರಹ್ಮಣ್ಯ ಗುರುರಾಜ ತ್ವಾಂ ವೃಂದಾವನ ವಿಲಾಸಿನಮ್ |
ಕುರ್ವನ್ ಪ್ರದಕ್ಷಿಣಂ ವಂದೇ ತೀರ್ಥಯಾತ್ರಾಫಲಾಪ್ತಯೇ
||೧೫||

ಕಾಯವಾಗ್ಧೀ ಭವಾ ದೋಷಾಂಸ್ತವವೃಂದಾವನೋದಕಮ್
ತ್ರಿಃಪೀತಂ ನಾಶಯೇಣ್ಮೂರ್ಧ್ನಾ ಧೃತಂ
[ಪುಣ್ಯಂಸಮೇಧಯೇತ್] ||೧೬||

ಖಿನ್ನ ವಿನ್ನ ಜಪದ್ವೀಪ ಪೂತವಾತ ಮತ ಸ್ಥಿತ|
ಶ್ರೀಬ್ರಹ್ಮವ್ರತಗಣ್ಯೋಽಗ ಯೋಗವ್ರತತಪನ್ನವ || ೧೭ ||

ಧ್ಯಾಯಾಮಿ ಕಾಷಾಯಸುಚೇಲಪಿ ನಾಢ್ಯಂ |
ಧ್ಯಾಯಂತಮಂತಃ ಖಲು ವಿಟ್ಠಲಂ ತಂ ||
ಬ್ರಹ್ಮಣ್ಯತೀರ್ಥಂ ವರಭೋದಮುದ್ರಂ |
ವೃಂದಾವನಸ್ಥಂ ರವಿತುಲ್ಯಮೂರ್ತಿಮ್ || ೧೮ ||

ಕದಾಮುದಾಪೀಠ ವರೇವಸಂತಂ |
ಲಸಂತಮಂತಃ ಕೃಪಯಾದ್ರ್ರಚಿತ್ತಂ |
ಇಷ್ಟಾರ್ಥದಾನೋದ್ಯತಪಾಣಿಪದ್ಮಂ
ಬ್ರಹ್ಮಣ್ಯತೀರ್ಥಂ ಸದೃಶಾವಲೋಕೆ ||೧೯||

ಗಂಭೀರಸಂಸಾರಸಮುದ್ರ ಪಾರಂ
ತರೀತುಕಾಮಸ್ಯ ಜನಸ್ಯ ಲೋಕೇ || ಬ್ರಹ್ಮಣ್ಯತೀ
ರ್ಥೋಡುಪಮಂ ತರೇಣ
ನಸ್ಯಾದುಪಾಯಾಂತರ ಮತ್ರನೂನಮ್ || ೨೦ ||

Rarest Archive

ಬ್ರಹ್ಮಣ್ಯ ಯತಿರಾಜ ತ್ವಾಂಶರಣಂಗತವಾನಹಮ್ |
ಕರಾವಲಂಬನಂ ದೇಹಿ ಪತಿತಸ್ಯಭವಾರ್ಣವೇ ||೨೧||

ಇತಿ ಸ್ತೋತ್ರೇಣಯೋಮರ್ತ್ಯಃ ಸೇವತೇ ಗುರು ಪುಂಗವಮ್ |
ಅಶೇಷಕಷ್ಟರಾಹಿತ್ಯ ಮಿಷ್ಟಲಾಭಂಚವಿಂದತೇ ||೨೨||

ಸ್ನಾತ್ವಾನಯೋದಕಂ ಜಪ್ತ್ವಾ ಪಿಬನ್ನುದರಪೀಡಯಾ |
ವಿಮುಕ್ತಃ ಸುಖಮಾಪ್ನೋತಿ ದೀರ್ಘಮಾಯುಶ್ಚವಿಂದತಿ ||೨೩||

ಅಷ್ಟೋತ್ತರಶತಂ ಸ್ತೋತ್ರಮೇತತ್ಪಠ್ಯೇऽಹನಿದ್ವಿಜಃ |
ಜ್ವರಭೂತಾದಿಪೀಡಾಭಿರ್ಮುಚ್ಯತೇ ನಾತ್ರ ಸಂಶಯಃ ||೨೪||

ವೃಂದಾವನಸ್ಥಂಬ್ರಹ್ಮಣ್ಯ ಗುರುರಾಜಂ ಚಸ್ಮರೇತ್ |
ತಸ್ಯಸರ್ವೇಷ್ಟಲಾಭಂ ಸ್ಯಾದತ್ರಸಾಕ್ಷೀನೃಕೇಸರಿ ||೨೫||

ಬ್ರಹ್ಮಣ್ಯಾರ್ಯಸ್ತತೋऽಭೂನ್ನರಹರಿ ಮನಿಶಂ
ಪೂಜಯನ್ ಕಣ್ವನದ್ಯಾಂ
ಸ್ನಾತ್ವಾಯಚ್ಛಿಷ್ಯಾಹೃತಾನ್ನಂ ಹ್ಯುದಜಗಮುದಕಂ
ಪ್ರೋಕ್ಷ್ಯ ತಪ್ತಂ ವಿಧಾಯ
ಭುಕ್ತ್ವಾ ಸ್ನಾತ್ವಾ ಪುನಶ್ಚ ಕ್ವಚಿದುಪ ಗತವಾನ್
ಭೂಸ್ಥಿತಾಂ ವಿಟ್ಠಲಾರ್ಚಾಂ
ಶಿಷ್ಯೇಭ್ಯೋ ಮಧ್ವಶಾಸ್ತ್ರಂ ಹ್ಯನಿಶ
ಮಪಿಜಗೌವಿಠ್ಠಲ ಪ್ರೀತಿಮಿಚ್ಛನ್ ||೨೬||

ಇತಿ ಬ್ರಹ್ಮಣ್ಯತೀರ್ಥಗುರು ವರ್ಯ ಕೃಪಾಬಲಾತ್ |
ರಚಿತಂ ಶ್ರೀನಿವಾಸೇನ ತೇನ ಸಃ ಪ್ರೀಯತಾಂಹರಿಃ || ೨೭ ||

Rarest Archiver